# ರಾಜ್ಯ ಒಕ್ಕಲಿಗರ ಸಂಘ

## ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಕೃಷ್ಣರಾಜ ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು.

ಸಂಖ್ಯೆ:ರಾಒಸಂ/ಡೆಂಟಲ್/ಸಿ&ಆರ್–3/2019–20

ಬೆಂಗಳೂರು,
ದಿನಾಂಕ: 20 ಮೇ, 2020.

## ಅಧಿಸೂಚನೆ

ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಕಲಂ–27(ಎ) ರನ್ವಯ ರಾಜ್ಯ ಒಕ್ಕಲಿಗರ ಸಂಘಕ್ಕೆ ಸರ್ಕಾರದಿಂದ ನೇಮಕಗೊಂಡಿರುವ ಆಡಳಿತಾಧಿಕಾರಿಯವರು ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು ಸಂಸ್ಥೆಗೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ರೂಪಿಸಲು ಉದ್ದೇಶಿಸಿ, ಅಧಿಸೂಚನೆ ಸಂಖ್ಯೆ:ರಾಒಸಂ/ಡೆಂಟಲ್/ಸಿ&ಆರ್–3/2019–20 ದಿನಾಂಕ:05.12.2019 ರಲ್ಲಿ ಕರಡು ನಿಯಮಾವಳಿಗಳ ಪ್ರತಿಯನ್ನು ರಾಜ್ಯ ಒಕ್ಕಲಿಗರ ಸಂಘ ಕೇಂದ್ರ ಕಛೇರಿ ಹಾಗೂ ಸದರಿ ಸಂಸ್ಥೆಗಳ ನೋಟೀಸ್ ಬೋರ್ಡಿನಲ್ಲಿ ಮತ್ತು ಅಂತರ್ಜಾಲದಲ್ಲಿ ಪ್ರಕಟಿಸಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಅಧಿಸೂಚನೆ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿತ್ತು,

ಸದರಿ ಕರಡು ನಿಯಮಾವಳಿಗಳ ಪ್ರತಿಯನ್ನು ದಿನಾಂಕ:05.12.2019ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಗಿತ್ತು,

ಮತ್ತು, ಸದರಿ ಕರಡು ನಿಯಮಾವಳಿಗಳ ಬಗ್ಗೆ ಸ್ವೀಕೃತವಾಗಿರುವ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಡಳಿತಾಧಿಕಾರಿಯವರು ಪರಿಗಣಿಸಿರುತ್ತಾರೆ,

ಆದುದರಿಂದ, ಈಗ ರಾಜ್ಯ ಒಕ್ಕಲಿಗರ ಸಂಘದ ಆಡಳಿತಾಧಿಕಾರಿಯವರು ಸಂಘದ ಬೈಲಾದಲ್ಲಿನ ನಿಬಂಧನೆ 8ರ ಉಪನಿಬಂಧನೆ (9)ರಡಿ ಪ್ರದತ್ತವಾದ ಅಧಿಕಾರದನ್ವಯ ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸಿರುತ್ತಾರೆ:–

## ನಿಯಮಗಳು

### 1. ಶೀರ್ಷಿಕೆ ಮತ್ತು ಪ್ರಾರಂಭ:

(i) ಈ ನಿಯಮಾವಳಿಗಳನ್ನು ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು (ವೃಂದ ಮತ್ತು ನೇಮಕಾತಿ) ನಿಯಮಾವಳಿ, 2019 ಎಂದು ಕರೆಯತಕ್ಕದ್ದು.

(ii) ಈ ನಿಯಮಾವಳಿಗಳು ರಾಜ್ಯ ಒಕ್ಕಲಿಗರ ಸಂಘದ ಕೇಂದ್ರ ಕಛೇರಿ ನೋಟೀಸ್ ಬೋರ್ಡ್‌ನಲ್ಲಿ ಹಾಗೂ ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುತ್ತದೆ.

### 2. ಅನ್ವಯಿಕೆ:

(i) ಈ ನಿಯಮಾವಳಿಗಳು ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಸೇವೆಗೆ ನಿಯಮಾನುಸಾರ ನೇಮಕಗೊಂಡ ಖಾಯಂ ನೌಕರರಿಗೆ ಅನ್ವಯವಾಗುತ್ತದೆ.

(ii) ಈ ನಿಯಮಾವಳಿಗಳು ತಾತ್ಕಾಲಿಕವಾಗಿ ನೇಮಕಗೊಂಡ ನೌಕರರಿಗೆ ಅನ್ವಯಿಸುವುದಿಲ್ಲ.

**3. ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆ:**

(i) ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ವಿವಿಧ ಹುದ್ದೆಗಳು ಅನುಬಂಧಿಸಿದ ಷೆಡ್ಯೂಲ್-I ರ ಅಂಕಣ-2 ರಲ್ಲಿ ನಿಗದಿಪಡಿಸಿದಂತೆ ಇರತಕ್ಕದ್ದು. ಹುದ್ದೆಗಳ ಸಂಖ್ಯೆ, ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆಯು ಅನುಕ್ರಮವಾಗಿ ಅಂಕಣ-3, 4 ಮತ್ತು 5 ರಲ್ಲಿರುವಂತೆ ಇರತಕ್ಕದ್ದು.

(ii) ರಾಜ್ಯ ಒಕ್ಕಲಿಗರ ಸಂಘವು ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ 1960 ರಡಿಯಲ್ಲಿ ನೋಂದಾಯಿಸಲ್ಪಟ್ಟಿರುವ ಒಂದು ಖಾಸಗಿ ಸಂಸ್ಥೆಯಾಗಿದ್ದು, ಇದರ ಅಧೀನದಲ್ಲಿರುವ ವಿವಿಧ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವೃಂದಗಳ ನೌಕರರಿಗೆ ವೇತನ ಶ್ರೇಣಿಯನ್ನು ಇದುವರೆವಿಗೆ ನಿಗದಿಪಡಿಸಿ ಅಧಿಸೂಚಿಸಿರುವುದಿಲ್ಲ. ವೇತನ ಶ್ರೇಣಿ ನೀಡುವುದು ಆಡಳಿತ ಮಂಡಳಿ ನೀತಿ ನಿಯಮಗಳಿಗೆ, ಸಂಪನ್ಮೂಲಗಳ ಲಭ್ಯತೆ ಹಾಗೂ ಕಾಲಕಾಲದ ಆರ್ಥಿಕ ಪರಿಸ್ಥಿತಿಗೆ ಸಂಬಂಧಪಟ್ಟದ್ದಾಗಿರುತ್ತದೆ. ವೃಂದ ಮತ್ತು ನೇಮಕಾತಿ ನಿಯಮಗಳ ನಮೂನೆಯನ್ವಯ, ಷೆಡ್ಯೂಲ್-I ರಲ್ಲಿ ನಮೂದಿಸಲಾಗಿರುವ ಎಲ್ಲಾ ಮಂಜೂರಾದ ಹುದ್ದೆಗಳ ಎದುರಿಗೆ ವೇತನ ಶ್ರೇಣಿಯನ್ನು ನಮೂದಿಸುವುದು ರೂಢಿಯಲ್ಲಿದ್ದರೂ ಸಹ ಮೇಲೆ ತಿಳಿಸಿದ ಕಾರಣಗಳಿಂದ ವೇತನ ಶ್ರೇಣಿಗಳನ್ನು ಷೆಡ್ಯೂಲ್-1 ರಲ್ಲಿ ನಮೂದಿಸಿರುವುದಿಲ್ಲ.

(iii) ಷೆಡ್ಯೂಲ್-I ರಲ್ಲಿ ವಿವರಿಸಿದ ಹುದ್ದೆಗಳು ಈ ಸಂಸ್ಥೆಯ ಮಂಜೂರಾದ ವೃಂದಬಲ ಆಗಿರುತ್ತದೆ. ಇನ್ನು ಮುಂದೆ ಯಾವುದೇ ವೃಂದದಲ್ಲಿ ಹೆಚ್ಚುವರಿ ಹುದ್ದೆಗಳನ್ನು ಸೃಜಿಸಲು ಸಂಸ್ಥೆಯ ಮುಖ್ಯಸ್ಥರು ಅವಶ್ಯಕ ಸಮರ್ಥನೆಯೊಂದಿಗೆ ಕಳುಹಿಸಿದ ಪ್ರಸ್ತಾವನೆಯ ಮೇರೆಗೆ ಹಾಗೂ ಹುದ್ದೆಗಳನ್ನು ಸೃಜಿಸುವುದು ಅವಶ್ಯಕವೆಂದು ಕಂಡುಬಂದಲ್ಲಿ ಕಾರ್ಯಕಾರಿ ಸಮಿತಿಯು ಪ್ರಸ್ತಾವನೆಯನ್ನು ಅನುಮೋದಿಸಿದ ನಂತರ ರಾಜ್ಯ ಒಕ್ಕಲಿಗರ ಸಂಘದ ಕೇಂದ್ರ ಕಛೇರಿಯಿಂದ ಹೆಚ್ಚುವರಿ ಹುದ್ದೆಗಳ ಮಂಜೂರಾತಿಗೆ ಆಡಳಿತಾತ್ಮಕ ಆದೇಶ ಹೊರಡಿಸತಕ್ಕದ್ದು. ಈ ರೀತಿ ಸೃಜಿಸಿದ ಹೆಚ್ಚುವರಿ ಹುದ್ದೆಗಳನ್ನು 6 ತಿಂಗಳೊಳಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿಮಾಡಿ ವೃಂದಬಲದಲ್ಲಿ ಸೇರ್ಪಡೆಗೊಳಿಸತಕ್ಕದ್ದು.

(iv) ಇದೇ ರೀತಿ ಷೆಡ್ಯೂಲ್-I ರಲ್ಲಿ ಒಳಗೊಂಡಿಲ್ಲದ ಹಾಗೂ ತೀರಾ ಅನಿವಾರ್ಯವೆನಿಸಿದ ಯಾವುದೇ ಹೊಸ ಹುದ್ದೆಗಳ ಸೃಜನೆಯನ್ನು ಸಹ ಸಂಸ್ಥೆಯ ಮುಖ್ಯಸ್ಥರು ಅವಶ್ಯಕ ಸಮರ್ಥನೆಯೊಂದಿಗೆ ಕಳುಹಿಸಿದ ಪ್ರಸ್ತಾವನೆಯ ಮೇರೆಗೆ ಹಾಗೂ ಹುದ್ದೆಗಳನ್ನು ಸೃಜಿಸುವುದು ಅವಶ್ಯಕವೆಂದು ಕಂಡುಬಂದಲ್ಲಿ ಕಾರ್ಯಕಾರಿ ಸಮಿತಿಯು ಪ್ರಸ್ತಾವನೆಯನ್ನು ಅನುಮೋದಿಸಿದ ನಂತರ ನೇಮಕಾತಿ ವಿಧಾನ ನಿಗದಿಪಡಿಸಿ ರಾಜ್ಯ ಒಕ್ಕಲಿಗರ ಸಂಘದ ಕೇಂದ್ರ ಕಛೇರಿಯಿಂದ ಹೊಸ ಹುದ್ದೆಗಳ ಮಂಜೂರಾತಿಗೆ ಆಡಳಿತಾತ್ಮಕ ಆದೇಶ ಹೊರಡಿಸತಕ್ಕದ್ದು. ನೇಮಕಾತಿ ವಿಧಾನ ನಿಗದಿಪಡಿಸದೇ ಯಾವುದೇ ಹೊಸ ಹುದ್ದೆಯನ್ನು ಭರ್ತಿ ಮಾಡತಕ್ಕದ್ದಲ್ಲ. ಈ ರೀತಿ ಸೃಜಿಸಿದ ಹೊಸ ಹುದ್ದೆಗಳನ್ನು 6 ತಿಂಗಳೊಳಗೆ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೇರ್ಪಡೆಗೊಳಿಸತಕ್ಕದ್ದು.

(v) ಮೇಲಿನ ಉಪನಿಯಮ (iii) ಮತ್ತು (iv) ರಂತೆ ಸೃಜಿಸಲಾಗುವ ಹೆಚ್ಚುವರಿ ಹುದ್ದೆಗಳು /ಹೊಸ ಹುದ್ದೆಗಳು ಉನ್ನತ ನಿಯಂತ್ರಣ ಪ್ರಾಧಿಕಾರ(Apex Body) ನಿಗದಿಪಡಿಸಿರುವ ಸಿಬ್ಬಂದಿ ಮಾದರಿಯ ಪ್ರಕಾರ ಹಾಗೂ ಅದರ ಮಿತಿಯೊಳಗೆ ಇರತಕ್ಕದು.

(vi) ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಿಂದ ಸಾಮಾನ್ಯ ವರ್ಗದ ಹುದ್ದೆಗಳಾಗಿದ್ದು ಜೇಷ್ಠತೆ, ಬಡ್ತಿ ಮತ್ತು ಸಂಘದ ವಿವಿಧ ಸಂಸ್ಥೆಗಳಲ್ಲಿ ಅಂತರ್-ವರ್ಗಾವಣೆ ಉದ್ದೇಶಗಳಿಗಾಗಿ ಒಂದುಗೂಡಿಸಿದ ಹುದ್ದೆಗಳು (Pooled Posts) ಅನುಬಂಧಿಸಿದ ಷೆಡ್ಯೂಲ್- II ರಲ್ಲಿ ವಿವರಿಸಿದಂತೆ ಇರತಕ್ಕದ್ದು..

(vii) ಷೆಡ್ಯೂಲ್-1ರಲ್ಲಿ ಸೇರ್ಪಡೆಗೊಳ್ಳದಿರುವ ಹಾಗೂ ಸಂಸ್ಥೆಯಲ್ಲಿ ಅಸ್ತಿತ್ವದಲ್ಲಿರುವ ಹುದ್ದೆಗಳಲ್ಲಿ ಖಾಯಂ ಆಧಾರದ ಮೇಲೆ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಈಗಿನ ಪದನಾಮ ಮತ್ತು ಸೇವಾ ಷರತ್ತುಗಳೊಂದಿಗೆ ಅವರ ಪದಾವಧಿಯವರೆಗೆ ಮುಂದುವರೆಯತಕ್ಕದ್ದು. ತದನಂತರ ಅಂತಹ ಹುದ್ದೆಗಳು ರದ್ದುಗೊಳ್ಳುವುವು ಮತ್ತು ಷೆಡ್ಯೂಲ್-I ರಲ್ಲಿ ನಮೂದಿಸಿರುವ ಹುದ್ದೆಗಳು ಮಾತ್ರ ಸಂಸ್ಥೆಯಲ್ಲಿ ಮುಂದುವರೆಯತಕ್ಕದ್ದು.

**4. <u>ಪರಿಭಾಷೆ:</u>**

ಈ ನಿಯಮಾವಳಿಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು;

1) 'ಸಂಘ' ಎಂದರೆ ರಾಜ್ಯ ಒಕ್ಕಲಿಗರ ಸಂಘ.

2) 'ಪದಾಧಿಕಾರಿಗಳು' ಎಂದರೆ ಸಂಘದ ಬೈಲಾದ ನಿಬಂಧನೆ 7(1) (ಅ)ರ ಪ್ರಕಾರ ವ್ಯಾಖ್ಯಾನಿಸಿದ ಅಧ್ಯಕ್ಷರು ಹಾಗೂ ಇತರೆ ಪದಾಧಿಕಾರಿಗಳು ಒಳಗೊಂಡಂತೆ ಆಗಿರುತ್ತಾರೆ.

3) 'ಕಾರ್ಯಕಾರಿ ಸಮಿತಿ' ಎಂದರೆ ಸಂಘದ ಬೈಲಾ ಪ್ರಕಾರ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿಗೆ ಸದಸ್ಯರಿಂದ ಚುನಾಯಿತಗೊಂಡ ವ್ಯಕ್ತಿ/ವ್ಯಕ್ತಿಗಳು ಆಗಿರುತ್ತಾರೆ.

4) 'ಆಡಳಿತಾಧಿಕಾರಿ' ಎಂದರೆ ರಾಜ್ಯ ಸರ್ಕಾರವು ರಾಜ್ಯ ಒಕ್ಕಲಿಗರ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರನ್ವಯ ನೇಮಿಸಿದ ಅಧಿಕಾರಿ ಆಗಿರುತ್ತಾರೆ.

5) 'ಸಿ.ಇ.ಒ.' ಎಂದರೆ ರಾಜ್ಯ ಒಕ್ಕಲಿಗರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಗಿರುತ್ತಾರೆ.

6) 'ಮಂಜೂರಾದ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರ' ಎಂದರೆ ಸಂಘದ ಕಾರ್ಯಕಾರಿ ಸಮಿತಿ ಆಗಿರುತ್ತದೆ.

7) 'ಖಾಯಂ ಸಿಬ್ಬಂದಿ' ಎಂದರೆ ಮಂಜೂರಾದ/ ಅಸ್ತಿತ್ವದಲ್ಲಿರುವ (substantive) ಹುದ್ದೆಗೆ ನೇಮಕಗೊಂಡು ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ ಸಿಬ್ಬಂದಿ ಆಗಿರುತ್ತಾರೆ.

8) 'ತಾತ್ಕಾಲಿಕ ಸಿಬ್ಬಂದಿ' ಎಂದರೆ ಮಂಜೂರಾದ ಹುದ್ದೆಗೆ ನೇಮಕಾತಿ ನಿಯಮಾವಳಿ ಅನುಸಾರ ನೇಮಕಗೊಳ್ಳದೇ ತುರ್ತು ಅವಶ್ಯಕತೆಗನುಗುಣವಾಗಿ ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆಗೆ ನೇಮಕಗೊಂಡ ತಾತ್ಕಾಲಿಕ ಸಿಬ್ಬಂದಿಯಾಗಿರುತ್ತಾರೆ.

9) 'ಸಂಸ್ಥೆಗಳು' ಎಂದರೆ ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು ಆಗಿರುತ್ತದೆ.

10) 'ಸಂಸ್ಥೆಯಲ್ಲಿನ ಹುದ್ದೆ/ಗಳು' ಎಂದರೆ ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು ಸಂಸ್ಥೆಗೆ ಈ ನಿಯಮಾವಳಿಯ ಷೆಡ್ಯೂಲ್-1ರಲ್ಲಿ ಸೂಚಿಸಲಾದ ಹುದ್ದೆಗಳು.

11) 'ಒಂದುಗೂಡಿಸಲಾದ ಹುದ್ದೆಗಳು'(Pooled Posts) ಎಂದರೆ ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಸಾಮಾನ್ಯ ವರ್ಗದ(common cadre) ಹುದ್ದೆಗಳಾಗಿದ್ದು ಜೇಷ್ಠತೆ, ಮುಂಬಡ್ತಿ ಮತ್ತು ಸಂಘದ ವಿವಿಧ ಸಂಸ್ಥೆಗಳಲ್ಲಿ ಅಂತರ್-ವರ್ಗಾವಣೆ ಸಲುವಾಗಿ ಷೆಡ್ಯೂಲ್-II ರಲ್ಲಿ ಒಂದುಗೂಡಿಸಲಾದ ಹುದ್ದೆಗಳು.

12) 'ಆಯ್ಕೆ ಮಂಡಳಿ' (Board of Selection) ಎಂದರೆ ಈ ನಿಯಮಾವಳಿಗಳಲ್ಲಿ ವಿವಿಧ ವರ್ಗಗಳ ಹುದ್ದೆಗಳಿಗೆ ನಿಗದಿಪಡಿಸಿದ ಆಯ್ಕೆ ಮಂಡಳಿಗಳು.

13) 'ಬೋಧಕ ಸಿಬ್ಬಂದಿ' ಎಂದರೆ ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಮಂಜೂರಾಗಿರುವ ಪ್ರೊಫೆಸರ್, ಅಸೋಸಿಯೇಟ್ ಪ್ರೊಫೆಸರ್ ಮತ್ತು ಅಸಿಸ್ಟೆಂಟ್ ಪ್ರೊಫೆಸರ್ ಮತ್ತು ಟ್ಯೂಟರ್ ಹುದ್ದೆಗಳು ಆಗಿರುತ್ತದೆ.

14) 'ಉನ್ನತ ನಿಯಂತ್ರಣ ಪ್ರಾಧಿಕಾರ (Apex Body) ಎಂದರೆ ಭಾರತೀಯ ದಂತವೈದ್ಯ ಪರಿಷತ್ತು ಆಗಿರುತ್ತದೆ.

15) 'ರಾಜ್ಯ' ಎಂದರೆ ಕರ್ನಾಟಕ ರಾಜ್ಯ.

ಈ ನಿಯಮಾವಳಿಗಳಲ್ಲಿ ನಿರ್ದಿಷ್ಟವಾಗಿ ವ್ಯಾಖ್ಯಾನಿಸದಿರುವ ಇತರ ಪರಿಭಾಷೆಗಳು ಭಾರತೀಯ ದಂತವೈದ್ಯ ಪರಿಷತ್ತಿನ ಮಾರ್ಗಸೂಚಿಗಳಲ್ಲಿರುವಂತೆ ಹಾಗೂ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿದಂತೆ ಇರತಕ್ಕದ್ದು ಮತ್ತು ಅವುಗಳನ್ನು ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆಗೆ ಅನ್ವಯವಾಗುವಷ್ಟರ ಮಟ್ಟಿಗೆ ಅರ್ಥೈಸಿಕೊಳ್ಳುವುದು.

**5. <u>ಸಿಬ್ಬಂದಿ ನೇಮಕಾತಿ:</u>**

(i) ಖಾಯಂ ಅಥವಾ ತಾತ್ಕಾಲಿಕ ಹುದ್ದೆಗಳನ್ನು ಸಂಬಂಧಪಟ್ಟ ಸಂಸ್ಥೆಯ ಮುಖ್ಯಸ್ಥರ ಪ್ರಸ್ತಾವನೆ ಮೇರೆಗೆ ಮಾತ್ರ ಹಾಗೂ ಅವಶ್ಯಕತೆಗನುಗುಣವಾಗಿ ಕಾರ್ಯಕಾರಿ ಸಮಿತಿಯು ಈ ನಿಯಮಾವಳಿಗಳನ್ವಯ ಮಾತ್ರ ನೇಮಿಸಿಕೊಳ್ಳತಕ್ಕದ್ದು. ಷೆಡ್ಯೂಲ್-I ರಲ್ಲಿ ನಮೂದಿಸಿದ ಹುದ್ದೆಗಳ ಮಿತಿಯನ್ನು ಮೀರಿ ಯಾವುದೇ ನೇಮಕಾತಿ ಮಾಡಿಕೊಳ್ಳುವಂತಿಲ್ಲ.

(ii) ಕಾರ್ಯಕಾರಿ ಸಮಿತಿಯು ಸಂಸ್ಥೆಯ ಮುಖ್ಯಸ್ಥರಿಂದ ಹುದ್ದೆಯ ಸೃಜನೆಗೆ ಸಮರ್ಥನೆಯೊಂದಿಗೆ ಹಾಗೂ ಹುದ್ದೆ ಸೃಜನೆಯು ಎಷ್ಟು ಅವಧಿಗೆ ಅವಶ್ಯಕವೆಂಬ ವಿವರಗಳೊಂದಿಗೆ ಪ್ರಸ್ತಾವನೆಯು ಸ್ವೀಕೃತಗೊಂಡಲ್ಲಿ ಸಂಸ್ಥೆಯಲ್ಲಿನ ಉನ್ನತ ಶೈಕ್ಷಣಿಕ ಕೌಶಲ್ಯ ಹಾಗೂ ವೃತ್ತಿಪರ ಸಾಧನೆ ಕೊರತೆ ತುಂಬುವ ಸಲುವಾಗಿ ಮತ್ತು ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸಲು ಮತ್ತು ಕ್ಲಿನಿಕಲ್ ಹಾಗೂ ಇತರೆ ಕ್ಷೇತ್ರದಲ್ಲಿ ಸಂಶೋಧನೆ/ ಉನ್ನತ ಶಿಕ್ಷಣ ನಡೆಸಲು ಒಂದು ಸ್ಪೆಷಲಿಸ್ಟ್/ಕನ್ಸಲ್ಟೆಂಟ್ ಹುದ್ದೆಯನ್ನು ಸೃಜಿಸಬಹುದಾಗಿದೆ.

(iii) (ಅ) ಈ ರೀತಿ ನೇಮಕಗೊಳ್ಳುವ ಸ್ಪೆಷಲಿಸ್ಟ್/ಕನ್ಸಲ್ಟೆಂಟ್‌ರವರು ಸಂಸ್ಥೆಯ ಸೇವಾ ನಿರ್ವಹಣೆ ಮಟ್ಟವನ್ನು ಉನ್ನತೀಕರಿಸಲು ಅವಶ್ಯವಿರುವ ತಾಂತ್ರಿಕ ಮತ್ತು ವೃತ್ತಿಪರ ಪರಿಣಿತಿಯನ್ನು ಪೂರೈಸುವಂತಿರಬೇಕು.

(ಆ) ಸಂಸ್ಥೆಗೆ ಸೂಕ್ತವಾದ ಸ್ಪೆಷಲಿಸ್ಟ್/ಕನ್ಸಲ್ಟೆಂಟ್ ರನ್ನು ಆಯ್ಕೆ ಮಾಡಲು ಈ ಕೆಳಕಂಡ ಸಮಿತಿಯನ್ನು ನಿಗದಿಪಡಿಸಿದೆ.

| | | |
|---|---|---|
| (1) | ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ. | ಅಧ್ಯಕ್ಷರು |
| (2) | ಇಬ್ಬರು ವಿಷಯ ಪರಿಣಿತರು ಅದರಲ್ಲಿ ಕಾರ್ಪೋರೇಟ್ ಆಸ್ಪತ್ರೆಯಿಂದ ಒಬ್ಬರು ಹಾಗೂ ಮತ್ತೊಬ್ಬರು ಮಾನ್ಯತೆ ಪಡೆದ ದಂತವೈದ್ಯ ಸಂಸ್ಥೆಯಿಂದ(ಶೈಕ್ಷಣಿಕ). | ಸದಸ್ಯರುಗಳು |
| (3) | ಪ್ರಿನ್ಸಿಪಾಲ್, ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು. | ಸದಸ್ಯರು |
| (4) | ಸಂಬಂಧಪಟ್ಟ ವಿಭಾಗ ಮುಖ್ಯಸ್ಥರು, ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು. | ಸದಸ್ಯ ಕಾರ್ಯದರ್ಶಿ |

(ಇ) ಆಯ್ಕೆ ಸಮಿತಿಯು ಸ್ಪೆಷಲಿಸ್ಟ್/ಕನ್ಸಲ್ಟೆಂಟ್‌ರವರ ಕಾರ್ಯನಿರ್ವಹಣೆ ಮತ್ತು ಅವರಿಗೆ ವಹಿಸಲಾಗುವ ಕಾರ್ಯಚಟುವಟಿಕೆಗಳ ಕುರಿತು ಅವರೊಂದಿಗೆ ಸಮಾಲೋಚಿಸುವುದು. ಸಂಸ್ಥೆಯ ಹಿತದೃಷ್ಟಿಯಿಂದ ಸ್ಪೆಷಲಿಸ್ಟ್/ ಕನ್ಸಲ್ಟೆಂಟ್ ರವರ ಪರಿಣಿತಿಯನ್ನು ಗರಿಷ್ಟಮಟ್ಟದಲ್ಲಿ ಉಪಯೋಗ ಪಡೆಯಲು ಇಲಾಖಾ ಮುಖ್ಯಸ್ಥರು/ಅಧಿಕಾರಿ ವರ್ಗ ಮತ್ತು ಬೋಧಕ ಸಿಬ್ಬಂದಿಯವರು ಸಹಕರಿಸತಕ್ಕದ್ದು.

## 6. ಬೋಧಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಪ್ರವೇಶಾತಿ:

(i) ಭಾರತೀಯ ದಂತ ವೈದ್ಯಕೀಯ ಪರಿಷತ್ತು ಹೊರಡಿಸಿರುವ "ಸ್ನಾತಕೋತ್ತರ ದಂತ ವೈದ್ಯಕೀಯ ಕೋರ್ಸ್ ನಿಯಮಾವಳಿ 2017" ದಿನಾಂಕ: 5.12.21017ರಿಂದ ಜಾರಿಗೆ ಬಂದಿರುತ್ತದೆ. ಭಾರತೀಯ ದಂತವೈದ್ಯ ಪರಿಷತ್ತು ಅಸ್ತಿತ್ವದಲ್ಲಿರುವ ಎಲ್ಲಾ ದಂತವೈದ್ಯ ಸಂಸ್ಥೆಗಳು ಮೂಲ ಸೌಕರ್ಯ ಮತ್ತು ನಿರ್ವಹಣಾ ಅಗತ್ಯಗಳನ್ನು (5 ಎಕರೆ ಭೂ ಅಗತ್ಯತೆ ಅಂಶ ಹೊರತುಪಡಿಸಿ) ಈ ನಿಯಮಾವಳಿಗಳು ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ 3 ವರ್ಷಗಳ ಅವಧಿಯೊಳಗೆ ಅನುಷ್ಠಾನಗೊಳಿಸಬೇಕೆಂದು ನಿಬಂಧನೆ ವಿಧಿಸಿರುತ್ತದೆ.

(ii) ಈ ನಿಯಮಾವಳಿಗಳಲ್ಲಿ 100 ದಂತವೈದ್ಯ ಪದವಿ ಸೀಟುಗಳ ಪ್ರವೇಶಾತಿಗೆ (Under Graduate-BDS) ಮತ್ತು 3 ಸ್ನಾತಕೋತ್ತರ ದಂತವೈದ್ಯ ಸೀಟುಗಳನ್ನು (Post Graduate –MDS) ಒಳಗೊಂಡ ಯೂನಿಟ್-1 ಕ್ಕೆ ಸಂಬಂಧಿಸಿದಂತೆ ದಂತ ವೈದ್ಯಶಾಸ್ತ್ರದ ಪ್ರತಿ ವಿಭಾಗ/ಸ್ಪೆಷಾಲಿಟಿಗೆ ಅನ್ವಯವಾಗುವ ಕನಿಷ್ಠ ಸಂಖ್ಯೆಯ ಬೋಧಕ ಸಿಬ್ಬಂದಿಯನ್ನು ನಿಗದಿಪಡಿಸಲಾಗಿದೆ. ಈ ನಿಯಮಾವಳಿಗಳು ಯೂನಿಟ್-1ರ ಸಿಬ್ಬಂದಿ ಸಂಖ್ಯೆಯನ್ನು ಮೀರಿ ದಂತ ವೈದ್ಯಶಾಸ್ತ್ರದ ಪ್ರತಿ ವಿಭಾಗ /ಸ್ಪೆಷಾಲಿಟಿಗೆ ಅನ್ವಯವಾಗುವಂತೆ ಸ್ನಾತಕೋತ್ತರ ಸೀಟುಗಳ ಯೂನಿಟ್-2ಕ್ಕೆ 1: 1: 2 ರ ಅನುಪಾತದಲ್ಲಿ ಪ್ರೊಫೆಸರ್, ಅಸೋಸಿಯೇಟ್ ಪ್ರೊಫೆಸರ್ ಮತ್ತು ಅಸಿಸ್ಟೆಂಟ್ ಪ್ರೊಫೆಸರ್‌ಗಳ ಹೆಚ್ಚುವರಿ ಬೋಧಕ ಸಿಬ್ಬಂದಿಯನ್ನು ಹೊಂದಲು ಅವಕಾಶ ಕಲ್ಪಿಸಿದೆ.

(iii) ಬೋಧಕ ಸಿಬ್ಬಂದಿಯು ದಂತವೈದ್ಯ ಕೋರ್ಸ್‌ಗಳನ್ನು ಹೊಂದಿಲ್ಲದ ವೈದ್ಯಕೀಯ ಕಾಲೇಜುಗಳಲ್ಲಿ ಪಡೆದಿರುವ ಬೋಧನಾ ಅನುಭವವನ್ನು ಸ್ನಾತಕೋತ್ತರ ದಂತವೈದ್ಯ ವಿದ್ಯಾರ್ಥಿಗಳಿಗೆ ಬೋಧಿಸುವ ಸಲುವಾಗಿ ಪರಿಗಣಿಸತಕ್ಕದ್ದಲ್ಲ. ದಂತವೈದ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ವಿದ್ಯಾರ್ಹತೆ ಹೊಂದಿರುವ ಬೋಧಕ ಸಿಬ್ಬಂದಿಯು ವೈದ್ಯಕೀಯ ಕಾಲೇಜಿನ ದಂತವೈದ್ಯ ವಿಭಾಗದಿಂದ ಸ್ಥಳಾಂತರಗೊಂಡಲ್ಲಿ ಅಂತಹ ಸಿಬ್ಬಂದಿಯನ್ನು ಸ್ನಾತಕೋತ್ತರ ಕೋರ್ಸ್ ಬೋಧನಾ ಸಿಬ್ಬಂದಿ ಎಂದು ಪರಿಗಣಿಸುವುದಕ್ಕೆ ಮುಂಚೆ ಅವರುಗಳು ದಂತ ವೈದ್ಯಕೀಯ ಕಾಲೇಜಿನಲ್ಲಿ/ಸಂಸ್ಥೆಯಲ್ಲಿ ಕನಿಷ್ಠ 3 ವರ್ಷಗಳ ಬೋಧನಾನುಭವವನ್ನು ಹೊಂದಿರತಕ್ಕದ್ದು.

(iv) ಅದರಂತೆ, ಒಕ್ಕಲಿಗರ ಸಂಘ ದಂತವೈದ್ಯ ಕಾಲೇಜು ಮತ್ತು ಆಸ್ಪತ್ರೆಗೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಭಾರತೀಯ ದಂತವೈದ್ಯ ಪರಿಷತ್ತು ನಿಗದಿಪಡಿಸಿರುವ ಸಿಬ್ಬಂದಿ ಮಾದರಿಯಲ್ಲಿ ಇರುವಂತೆ ನಿಗದಿಪಡಿಸಿ ಷೆಡ್ಯೂಲ್- I ಅಳವಡಿಸಿದೆ.

(V) ಯಾವುದೇ ಸ್ಪೆಷಾಲಿಟಿಯಲ್ಲಿ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳ ಪ್ರವೇಶಾತಿಯು 3 ವರ್ಷ ಮೀರಿದ ನಿರಂತರ ಅವಧಿಗೆ ಅವಶ್ಯಕವಾದ/ಅನುಮತಿಸಲಾದ ಪಿ.ಜಿ. ಯೂನಿಟ್‌ಗಳನ್ನು ರಚಿಸಲು ಕೊರತೆಬಿದ್ದಲ್ಲಿ ಅಥವಾ ಪಿ.ಜಿ.ಯೂನಿಟ್‌ಗಳನ್ನು/ಕೋರ್ಸುಗಳನ್ನು ರದ್ದುಪಡಿಸಿದಲ್ಲಿ ಆ ವಿಭಾಗಕ್ಕೆ ಒದಗಿಸಲಾಗಿರುವ ಬೋಧಕ ಸಿಬ್ಬಂದಿ ಸಂಖ್ಯೆಯನ್ನು ಭಾರತೀಯ ದಂತವೈದ್ಯ ಪರಿಷತ್( ಉನ್ನತ ನಿಯಂತ್ರಣ ಪ್ರಾಧಿಕಾರ) ನಿಗದಿಪಡಿಸಿರುವ ಮಾದರಿಯಂತೆ ಪಿ.ಜಿ. ಯೂನಿಟ್‌ಗಳಿಗೆ ಅನುಗುಣವಾಗಿ ಹೊಂದಾಣಿಕೆ ಮಾಡತಕ್ಕದ್ದು. ಹೆಚ್ಚುವರಿ ಆಗುವ ಬೋಧಕ ಸಿಬ್ಬಂದಿ ಹುದ್ದೆಗಳನ್ನು ಅವರ ಸೇವಾವಧಿಯವರೆಗೆ ಸೂಪರ್‌ನ್ಯೂಮರರಿ ಹುದ್ದೆಗಳೆಂದು ಪರಿಗಣಿಸತಕ್ಕದ್ದು. ತದನಂತರ ಅಂತಹ ಹೆಚ್ಚುವರಿ ಹುದ್ದೆಗಳನ್ನು ರದ್ದುಗೊಳಿಸತಕ್ಕದ್ದು.

(vi) 2007 ರ ಭಾರತೀಯ ದಂತವೈದ್ಯ ಪರಿಷತ್ತಿನ ಮಾರ್ಗಸೂಚಿಗಳನ್ವಯ ಸ್ನಾತಕೋತ್ತರ ಡಿಪ್ಲೊಮಾ ಸೀಟುಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿಯಾಗಿ ನೇಮಕಗೊಂಡಿರುವ/ಬಡ್ತಿ ಹೊಂದಿರುವ ಅಸೋಸಿಯೇಟ್ ಪ್ರೊಫೆಸರ್‌ಗಳು 2017ರ ಭಾರತೀಯ ದಂತವೈದ್ಯ ಪರಿಷತ್ತಿನ ಪರಿಷ್ಕೃತ ಮಾರ್ಗಸೂಚಿಗಳನ್ವಯ ಈಗ ಅಧಿಕವಾಗಿದ್ದು, ಇಂತಹ ಹುದ್ದೆಗಳಲ್ಲಿ ಖಾಯಂ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಯನ್ನು ಪದವಿ/ಸ್ನಾತಕೋತ್ತರ ಪದವಿ ಯೂನಿಟ್‌ಗಳಿಗೆ ನಿಗದಿಪಡಿಸಿರುವ ಸಿಬ್ಬಂದಿ ಮಾದರಿಯಂತೆ ಹೊಂದಾಣಿಕೆ ಮಾಡತಕ್ಕದ್ದು. ನಂತರವೂ ಅಧಿಕವಾಗಿರುವ ಬೋಧಕ ಸಿಬ್ಬಂದಿ ಹುದ್ದೆಗಳನ್ನು ಸೂಪರ್‌ನ್ಯೂಮರರಿ ಹುದ್ದೆಗಳೆಂದು ಪರಿಗಣಿಸಿ ಅವುಗಳಲ್ಲಿ ಸ್ಥಾನಪನ್ನರಾಗಿರುವ ಸಿಬ್ಬಂದಿಯ ಸೇವಾವಧಿಯವರೆಗೆ ಮುಂದುವರೆಸತಕ್ಕದ್ದು. ತದನಂತರ ಅಂತಹ ಹುದ್ದೆಗಳನ್ನು ರದ್ದುಗೊಳಿಸಕ್ಕದ್ದು.

(vii) ಉನ್ನತ ನಿಯಂತ್ರಣ ಪ್ರಾಧಿಕಾರ (ಅಪೆಕ್ಸ್ ಸಂಸ್ಥೆ) ಕಾಲಕಾಲಕ್ಕೆ ಹೊರಡಿಸುವ ತಿದ್ದುಪಡಿಗಳು/ಪರಿಷ್ಕೃತ ಮಾರ್ಗಸೂಚಿಗಳನ್ನು ಕಾರ್ಯಕಾರಿ ಸಮಿತಿಯು ಸಂಸ್ಥೆಗೆ ಅಳವಡಿಸಿಕೊಳ್ಳಲು ಅನುಮೋದಿಸುವುದಕ್ಕೆ ಬದ್ಧವಾಗಿ ಅವುಗಳನ್ನು ಅನ್ವಯಿಸತಕ್ಕದ್ದಾಗಿದೆ.

7. **<u>ದಂತವೈದ್ಯ ಪದವಿ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ದಂತವೈದ್ಯ ವಿದ್ಯಾರ್ಥಿಗಳಿಗೆ ಬೇಸಿಕ್ ಕ್ಲಿನಿಕಲ್ ಮತ್ತು ವೈದ್ಯಶಾಸ್ತ್ರ ವಿಷಯಗಳಲ್ಲಿ ಬೋಧನೆ:</u>**

ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಕೆಂಪೇಗೌಡ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರವು ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿನ ದಂತವೈದ್ಯ ಪದವಿ ಮತ್ತು ಸ್ನಾತಕೋತ್ತರ ದಂತವೈದ್ಯ ವಿದ್ಯಾರ್ಥಿಗಳಿಗೆ ಪ್ರೀ–ಮೆಡಿಕಲ್, ಪ್ಯಾರಾ–ಮೆಡಿಕಲ್ ಮತ್ತು ಕ್ಲಿನಿಕಲ್ ವಿಷಯಗಳಲ್ಲಿ ಬೋಧನಾ ಸೌಲಭ್ಯಗಳನ್ನು ಒದಗಿಸುವುದು.

8. **<u>ನೇರ ನೇಮಕಾತಿ:</u>**

ನೇಮಕಾತಿ ಪ್ರಾಧಿಕಾರವು ಯಾವುದೇ ಖಾಲಿ ಹುದ್ದೆಗಳನ್ನು ತುಂಬುವ ಅವಶ್ಯಕತೆ ಕಂಡುಬಂದಲ್ಲಿ ಖಾಲಿ ಹುದ್ದೆಗಳ ವಿವರ, ವರ್ಗೀಕರಣ, ಅರ್ಹತಾ ಷರತ್ತುಗಳು ಮತ್ತು ನೇಮಕಾತಿ ವಿಧಾನವನ್ನು ನಮೂದಿಸಿ ರಾಜ್ಯದ ಪ್ರಮುಖ ಕನ್ನಡ ಮತ್ತು ಇಂಗ್ಲಿಷ್ ವೃತ್ತ ಪತ್ರಿಕೆಗಳಲ್ಲಿ ಹಾಗೂ ಸೂಕ್ತವೆನಿಸುವ ಇತರೆ ಮಾಧ್ಯಮದಲ್ಲಿ ಪ್ರಕಟಣೆ ನೀಡಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಕ್ರಮಕೈಗೊಳ್ಳತಕ್ಕದ್ದು.

9. **<u>ಆಯ್ಕೆ ಮಂಡಳಿ:</u>**

ನೇಮಕಾತಿ ಪ್ರಾಧಿಕಾರವು ಅರ್ಹ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಈ ಕೆಳಕಂಡಂತೆ ಆಯ್ಕೆ ಮಂಡಳಿಗಳನ್ನು ನಿಗದಿಪಡಿಸಿದೆ.

(i) **ಬೋಧಕ ಸಿಬ್ಬಂದಿ ಹುದ್ದೆಗಳಿಗೆ:-**

| | | |
|---|---|---|
| (ಅ) | ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ. | ಅಧ್ಯಕ್ಷರು |
| (ಆ) | ವೈದ್ಯಕೀಯ ಶಿಕ್ಷಣ ನಿರ್ದೇಶಕರಿಂದ ವಿಷಯ ಪರಿಣಿತರಾಗಿ ನಾಮನಿರ್ದೇಶಿಸಲ್ಪಟ್ಟ ಸರ್ಕಾರಿ/ವಿಶ್ವವಿದ್ಯಾಲಯ/ಅನುದಾನಿತ ದಂತ ವೈದ್ಯಕೀಯ ಕಾಲೇಜಿನ ಪ್ರೊಫೆಸರ್. | ಸದಸ್ಯರು |
| (ಇ) | ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಮೂಲಕ ವಿಷಯ ಪರಿಣಿತರಾಗಿ ನಾಮ ನಿರ್ದೇಶಿಸಲ್ಪಟ್ಟ ಹೊರ ರಾಜ್ಯದ ಪ್ರೊಫೆಸರ್ | ಸದಸ್ಯರು |
| (ಈ) | ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಮೂಲಕ ವಿಷಯ ಪರಿಣಿತರಾಗಿ ನಾಮ ನಿರ್ದೇಶಿಸಲ್ಪಟ್ಟ ರಾಜ್ಯದ ಯಾವುದೇ ಖಾಸಗಿ ದಂತ ವೈದ್ಯಕೀಯ ಕಾಲೇಜಿನ ಪ್ರೊಫೆಸರ್ | ಸದಸ್ಯರು |
| (ಉ) | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ರಾಜ್ಯ ಒಕ್ಕಲಿಗರ ಸಂಘ. | ಸದಸ್ಯರು |
| (ಊ) | ಪ್ರಿನ್ಸಿಪಾಲ್, ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸತ್ರೆ, ಬೆಂಗಳೂರು. | ಸದಸ್ಯರು |
| (ಋ) | ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು, ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸತ್ರೆ, | ಸದಸ್ಯ ಕಾರ್ಯದರ್ಶಿ |

**ಕೋರಂ:** ಆಯ್ಕೆ ಮಂಡಳಿ ಸಭೆಗೆ ಮೇಲಿನಂತಿರುವ ಸದಸ್ಯರಲ್ಲಿ 5 ಸದಸ್ಯರು ಕೋರಂ ಆಗಿರತಕ್ಕದ್ದು. ಅವರುಗಳಲ್ಲಿ ಇಬ್ಬರು (ಆ)ರಲ್ಲಿನ ಅಥವಾ (ಇ) ರಲ್ಲಿನ ಅಥವಾ (ಈ) ರಲ್ಲಿನ ಸದಸ್ಯರು ಆಗಿರತಕ್ಕದ್ದು.

(ii) **ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹೊರತುಪಡಿಸಿದಂತೆ ತಾಂತ್ರಿಕ ಹಾಗೂ ನರ್ಸಿಂಗ್ ಹುದ್ದೆಗಳಿಗೆ:-**

| | | |
|---|---|---|
| (ಅ) | ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ. | ಅಧ್ಯಕ್ಷರು |
| (ಆ) | ರಾಜ್ಯ ಒಕ್ಕಲಿಗರ ಸಂಘ ಹೊರತುಪಡಿಸಿ ಯಾವುದೇ ದಂತ ವೈದ್ಯಕೀಯ ಕಾಲೇಜು/ಸಂಸ್ಥೆಯಿಂದ ಪರಿಣಿತಿ ಹೊಂದಿರುವ ಒಬ್ಬ ಪ್ರತಿನಿಧಿ | ಸದಸ್ಯರು |
| (ಇ) | ವೈದ್ಯಕೀಯ ಶಿಕ್ಷಣ ನಿರ್ದೇಶಕರಿಂದ ನಾಮನಿರ್ದೇಶಿಸಲ್ಪಟ್ಟ ಉಪನಿರ್ದೇಶಕರು ಅಥವಾ ಮೇಲ್ಪಟ್ಟ ದರ್ಜೆಯ ಅಧಿಕಾರಿ | ಸದಸ್ಯರು |
| (ಈ) | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ರಾಜ್ಯ ಒಕ್ಕಲಿಗರ ಸಂಘ. | ಸದಸ್ಯರು |
| (ಉ) | ಪ್ರಿನ್ಸಿಪಾಲ್, ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು. | ಸದಸ್ಯರು |
| (ಊ) | ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು, ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು. | ಸದಸ್ಯ ಕಾರ್ಯದರ್ಶಿ |

**ಕೋರಂ:** ಆಯ್ಕೆ ಮಂಡಳಿ ಸಭೆಗೆ ಮೇಲಿನಂತಿರುವ ಸದಸ್ಯರಲ್ಲಿ 4 ಸದಸ್ಯರು ಕೋರಂ ಆಗಿರತಕ್ಕದ್ದು. ಅವರುಗಳಲ್ಲಿ ಇಬ್ಬರು (ಆ)ಮತ್ತು (ಇ) ರಲ್ಲಿನ ಸದಸ್ಯರು ಆಗಿರತಕ್ಕದ್ದು.

**(iii) ಬೋಧಕೇತರ ಸಿಬ್ಬಂದಿ ಹುದ್ದೆಗಳಿಗೆ:-**

| | | |
|---|---|---|
| (ಅ) | ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ. | ಅಧ್ಯಕ್ಷರು |
| (ಆ) | ಆಡಳಿತ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ಕೇಂದ್ರ ಸರ್ಕಾರದ/ ರಾಜ್ಯ ಸರ್ಕಾರದ ಗ್ರೂಪ್-ಎ ವೃಂದದ ನಿವೃತ್ತ ಅಧಿಕಾರಿ | ಸದಸ್ಯರು |
| (ಇ) | ಸಹಕಾರ ಸಂಘಗಳ ನಿಬಂಧಕರಿಂದ ನಾಮನಿರ್ದೇಶಿಸಲ್ಪಟ್ಟ ಅಧಿಕಾರಿ. | ಸದಸ್ಯರು |
| (ಈ) | ಮುಖ್ಯ ಕಾರ್ಯನಿರ್ವಹಣಾಧಿಕಾರಿ,ರಾಜ್ಯ ಒಕ್ಕಲಿಗರ ಸಂಘ. | ಸದಸ್ಯರು |
| (ಉ) | ಪ್ರಿನ್ಸಿಪಾಲ್, ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆ. | ಸದಸ್ಯರು |
| (ಊ) | ಆಡಳಿತಾಧಿಕಾರಿ, ರಾಜ್ಯ ಒಕ್ಕಲಿಗರ ಸಂಘ ಕೇಂದ್ರ ಕಛೇರಿ. | ಸಂಚಾಲಕರು |

**ಕೋರಂ:** ಆಯ್ಕೆ ಮಂಡಳಿ ಸಭೆಗೆ ಮೇಲಿನಂತಿರುವ ಸದಸ್ಯರಲ್ಲಿ ಕನಿಷ್ಠ 3 ಸದಸ್ಯರು ಹಾಜರಿರತಕ್ಕದ್ದು. ಅವರುಗಳಲ್ಲಿ (ಆ) ಮತ್ತು (ಇ) ರಲ್ಲಿನ ಇಬ್ಬರು ಸದಸ್ಯರು ಹಾಜರಿರತಕ್ಕದ್ದು.

**10. ಅರ್ಹ ಅಭ್ಯರ್ಥಿಗಳ ಆಯ್ಕೆ:**

(i) ಆಯ್ಕೆ ಮಂಡಳಿಯು ನಿಗದಿಪಡಿಸಿದ ಆಯ್ಕೆ ವಿಧಾನವನ್ನು ಅಳವಡಿಸಿಕೊಂಡು ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಲ್ಲಿ ಅಂತಿಮ ಆಯ್ಕೆ ಪಟ್ಟಿಯನ್ನು ತಯಾರಿಸಿ ನೇಮಕಾತಿ ಪ್ರಾಧಿಕಾರಕ್ಕೆ ಕಳುಹಿಸುವುದು.

(ii) ಬೋಧನಾ ಹುದ್ದೆಗಳಿಗೆ ಆಯ್ಕೆ ವಿಧಾನವು ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಲ್ಲಿ ಉತ್ತಮ ಅಭ್ಯರ್ಥಿ ಆಯ್ಕೆಗೊಳ್ಳುವಂತೆ ಇರತಕ್ಕದ್ದು ಮತ್ತು ಷೆಡ್ಯೂಲ್-III ರಲ್ಲಿ ನಿಗದಿಪಡಿಸಿರುವ ಮಾನದಂಡಗಳು ಮತ್ತು ಕಾರ್ಯವಿಧಾನವನ್ನು ಒಳಗೊಂಡಿರತಕ್ಕದ್ದು.

(iii) ಬೋಧಕೇತರ, ತಾಂತ್ರಿಕ ಹಾಗೂ ಇತರೆ ಎಲ್ಲಾ ಹುದ್ದೆಗಳ ಆಯ್ಕೆಗೆ ರಾಜ್ಯ ಒಕ್ಕಲಿಗರ ಸಂಘದ ಕೇಂದ್ರ ಕಛೇರಿ ವೃಂದ ಮತ್ತು ನೇಮಕಾತಿ ನಿಯಮಾವಳಿ 2019 ರಲ್ಲಿ ನಿಗದಿಪಡಿಸಿದ ಮಾನದಂಡಗಳು ಮತ್ತು ಕಾರ್ಯವಿಧಾನವನ್ನು ಅಳವಡಿಸಿಕೊಳ್ಳತಕ್ಕದ್ದು.

**11. ಅಭ್ಯರ್ಥಿಗಳ ನೇಮಕಾತಿ:**

(i) ಆಯ್ಕೆ ಮಂಡಳಿಯು ಕಳುಹಿಸಿದ ಅಂತಿಮ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳನ್ನು ಅವಶ್ಯವಿರುವ ವೈದ್ಯಕೀಯ ತಪಾಸಣೆ ಮತ್ತು ಶೈಕ್ಷಣಿಕ ದಾಖಲೆಗಳ ಪರಿಶೀಲನೆ ನಂತರ ಕಾರ್ಯಕಾರಿ ಸಮಿತಿಯು ನೇಮಕಾತಿ ಮಾಡಿಕೊಳ್ಳತಕ್ಕದ್ದು.

(ii) ನೇಮಕಾತಿ ಆದೇಶ ಹೊರಡಿಸಿದ ನಂತರ ನೇಮಕಾತಿಗೊಂಡ ಅಭ್ಯರ್ಥಿಯು ನಿಗದಿತ ಕಾಲಾವಧಿಯೊಳಗೆ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಅವನ/ಅವಳ ನೇಮಕಾತಿಯು ರದ್ದುಗೊಳ್ಳುತ್ತದೆ. ಈ ಖಾಲಿ ಹುದ್ದೆಗೆ ಮೆರಿಟ್ ಅನ್ವಯ ನಂತರದ ಸ್ಥಾನದಲ್ಲಿರುವ ಅಭ್ಯರ್ಥಿಯನ್ನು ನೇಮಿಸಿಕೊಳ್ಳತಕ್ಕದ್ದು. ಎರಡನೇ ಅಭ್ಯರ್ಥಿಯೂ ಸಹ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಇಂತಹ ಹುದ್ದೆಯನ್ನು ಖಾಲಿ ಹುದ್ದೆ ಎಂದು ಪರಿಗಣಿಸಿ ಹೊಸದಾಗಿ ನೇಮಕಾತಿ ಪ್ರಕ್ರಿಯೆ ನಡೆಸತಕ್ಕದ್ದು.

12. **ಪರಿವೀಕ್ಷಣಾ ಅವಧಿ:**

(i) ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಸೇವೆಗೆ ನಿಯಮಾನುಸಾರ ನೇಮಕಗೊಂಡ ಎಲ್ಲಾ ಸಿಬ್ಬಂದಿಗೆ ಎರಡು ವರ್ಷಗಳ ಪರಿವೀಕ್ಷಣಾ ಅವಧಿ ಇರುತ್ತದೆ. ನೇಮಕಾತಿ ಹೊಂದಿದ ಸಿಬ್ಬಂದಿಯು ನೇಮಕಗೊಂಡ ಸಂಸ್ಥೆಯಲ್ಲಿಯೇ 2 ವರ್ಷದ ಪರಿವೀಕ್ಷಣಾ ಅವಧಿ ಪೂರ್ಣಗೊಳಿಸತಕ್ಕದ್ದು.

(ii) ನೇಮಕಾತಿ ಪ್ರಾಧಿಕಾರವು ಕಾರಣಗಳನ್ನು ಲಿಖಿತರೂಪದಲ್ಲಿ ದಾಖಲಿಸಿ ಪರಿವೀಕ್ಷಣಾ ಅವಧಿಯನ್ನು ಅವಶ್ಯಕವೆನಿಸಿದ ಅವಧಿಯವರೆಗೆ ವಿಸ್ತರಿಸಬಹುದು.

(iii) ನೇಮಕಾತಿ ಪ್ರಾಧಿಕಾರವು ಎರಡು ವರ್ಷಗಳ ಅಥವಾ ವಿಸ್ತರಿಸಿದ ಪರಿವೀಕ್ಷಣಾ ಅವಧಿಯು ಮುಕ್ತಾಯಗೊಂಡ ನಂತರ, ಪರೀಕ್ಷಾರ್ಥಿ ಅಭ್ಯರ್ಥಿಯ ಕಾರ್ಯನಿರ್ವಹಣೆ ಆಧರಿಸಿ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ್ದಾರೆ ಎಂದು ಘೋಷಿಸತಕ್ಕದ್ದು. ಬೋಧನಾ ಸಿಬ್ಬಂದಿಗೆ ಪಿ.ಬಿ.ಎ.ಎಸ್. ಪದ್ಧತಿ ಮೌಲ್ಯಮಾಪನ ಅನುಸರಿಸಿ ಪರಿವೀಕ್ಷಣಾ ಅವಧಿ ಘೋಷಿಸತಕ್ಕದ್ದು.

(iv) ಅತೃಪ್ತಿಕರ ಕಾರ್ಯನಿರ್ವಹಣೆ ಅಥವಾ ಪ್ರೊಬೇಷನ್ ಅವಧಿಯಲ್ಲಿ ಇತರೆ ಯಾವುದೇ ದುರ್ನಡತೆಗಾಗಿ ಯಾವ ಅಭ್ಯರ್ಥಿಯ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ್ದಾರೆಂದು ಘೋಷಿಸಲ್ಪಡುವುದಿಲ್ಲವೋ ಅಂತಹವರನ್ನು ಯಾವುದೇ ಪೂರ್ವಭಾವಿ ನೋಟೀಸ್ ನೀಡದೆ ಸೇವೆಯಿಂದ ವಜಾಗೊಳಿಸ ಬಹುದಾಗಿದೆ.

13. **ಮುಂಬಡ್ತಿ:**

(i) ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಪ್ರಕಾರ ಮಂಜೂರಾದ ವೃಂದಬಲದಲ್ಲಿ ಬಡ್ತಿ ಕೋಟಾದಡಿ ಹುದ್ದೆ ಖಾಲಿ ಇದ್ದಾಗ ಮತ್ತು ಆ ಹುದ್ದೆಯನ್ನು ಭರ್ತಿ ಮಾಡುವುದು ಅವಶ್ಯಕವೆನಿಸಿದಾಗ ನೇಮಕಾತಿ ಪ್ರಾಧಿಕಾರವು ಅರ್ಹ ನೌಕರರಿಗೆ ಬಡ್ತಿ ನೀಡುವುದನ್ನು ಪರಿಗಣಿಸತಕ್ಕದ್ದು.

(ii) ಬಡ್ತಿ ನೀಡಲು ಷೆಡ್ಯೂಲ್–IV ರಲ್ಲಿ ನಿಗದಿಪಡಿಸಿರುವ ಕಾರ್ಯವಿಧಾನವನ್ನು ಅಳವಡಿಸಕೊಳ್ಳತಕ್ಕದ್ದು.

14. **ಜೇಷ್ಠತೆ:**

(i) ಪ್ರತಿಯೊಂದು ವೃಂದಕ್ಕೆ ಸಂಬಂಧಿಸಿದಂತೆ ಪ್ರತಿ ವರ್ಷವೂ ಜನವರಿ ಒಂದನೇ ದಿನಾಂಕದಲ್ಲಿರುವಂತೆ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಪ್ರಕಟಪಡಿಸತಕ್ಕದ್ದು.

(ii) ಜೇಷ್ಠತಾ ಪಟ್ಟಿ ತಯಾರಿಸಲು ಷೆಡ್ಯೂಲ್–4 ರಲ್ಲಿ ನೀಡಲಾಗಿರುವ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು.

15. **ಕಾಲಮಿತಿ ವೇತನ ಬಡ್ತಿ ಯೋಜನೆ:**

(i) ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ಬಡ್ತಿ ಅವಕಾಶ ಇಲ್ಲದಿರುವ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ, ಅವರ ಸೇವಾವಧಿಯಲ್ಲಿ 10, 15, 20, 25 ಮತ್ತು 30 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ನಂತರ ಅನುಕ್ರಮವಾಗಿ ಅವರು ಹೊಂದಿರುವ ವೇತನ ಶ್ರೇಣಿಯಲ್ಲಿ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು(increment) ಒಟ್ಟು 5 ವೇತನ ಬಡ್ತಿ ಮೀರದಂತೆ ಮಂಜೂರು ಮಾಡತಕ್ಕದ್ದು. ಈ ಹೆಚ್ಚುವರಿ ವೇತನ ಬಡ್ತಿಯನ್ನು ಹಿಂದೆ ಪಡೆದ ವಾರ್ಷಿಕ ವೇತನ ಬಡ್ತಿಯ ದರದಲ್ಲಿ ಮೂಲ ವೇತನಕ್ಕೆ ಸೇರ್ಪಡೆಗೊಳಿಸಿ ಇತರೆ ಭತ್ಯೆಗಳಿಗೆ ಪರಿಗಣಿಸತಕ್ಕದ್ದು.

(ii) ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಲು ನೌಕರರ ಅರ್ಹತೆಯನ್ನು ಮುಂಬಡ್ತಿ ನೀಡುವಾಗ ಅನುಸರಿಸುವ ವಿಧಾನದಂತೆ ನಿರ್ಧರಿಸತಕ್ಕದ್ದು.

(iii) ಮುಂಬಡ್ತಿಗೆ ಅವಕಾಶ ಇದ್ದು, ಮುಂಬಡ್ತಿ ಹುದ್ದೆಗಳ ಕೊರತೆ ನಿಮಿತ್ತ ಬಡ್ತಿ ದೊರಕದ ಸಿಬ್ಬಂದಿಗೆ ಹಾಲಿ ಚಾಲ್ತಿಯಲ್ಲಿರುವ ಕಾಲಮಿತಿ ವೇತನ ಬಡ್ತಿ ಯೋಜನೆ ಅನ್ವಯವಾಗತಕ್ಕದ್ದು.

**16. <u>ಇತರೆ ನಿಯಮಗಳ ಅನ್ವಯಿಕೆ:</u>**

ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಸಿಬ್ಬಂದಿಯ ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರವು ಹೊರಡಿಸಿರುವ ಹಾಗೂ ಚಾಲ್ತಿಯಲ್ಲಿರುವ ನಿಯಮಾವಳಿಗಳು, ಈ ನಿಯಮಾವಳಿಗಳಲ್ಲಿನ ಉಪಬಂಧಗಳಿಗೆ ವಿರುದ್ಧವಾಗಿಲ್ಲದಿದ್ದಲ್ಲಿ ಅವುಗಳು ಈ ನಿಯಮಾವಳಿಗಳನ್ವಯ ನೇಮಕಗೊಂಡ ನೌಕರರಿಗೂ ಅನ್ವಯಗೊಳ್ಳುತ್ತವೆ.

**17. <u>ವ್ಯಾಖ್ಯಾನ:</u>**

ಈ ನಿಯಮಾವಳಿಗಳ ಯಾವುದೇ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ತೊಂದರೆ/ಗೊಂದಲ ಕಂಡುಬಂದಲ್ಲಿ, ಕಾರ್ಯಕಾರಿ ಸಮಿತಿಯು ಅಂತಹ ಉಪಬಂಧಗಳನ್ನು ರಾಜ್ಯ ಒಕ್ಕಲಿಗರ ಸಂಘದ ಕೇಂದ್ರ ಕಛೇರಿ ಕಾನೂನು ಅಧಿಕಾರಿಯ ಸಲಹೆ ಪಡೆದು ವ್ಯಾಖ್ಯಾನಿಸತಕ್ಕದ್ದು ಮತ್ತು ಈ ಬಗ್ಗೆ ಕಾರ್ಯಕಾರಿ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

ಆಡಳಿತಾಧಿಕಾರಿಯವರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಬಿ.ಸಿದ್ದಯ್ಯ)**
**ಮುಖ್ಯ ಕಾರ್ಯನಿರ್ವಹಣಾಧಿಕಾರಿ,**
**ರಾಜ್ಯ ಒಕ್ಕಲಿಗರ ಸಂಘ.**

**ಇವರಿಗೆ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ ವೈದ್ಯಕೀಯ ಶಿಕ್ಷಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು.
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು.
5. ರಿಜಿಸ್ಟ್ರಾರ್, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು.
6. ಆಡಳಿತಾಧಿಕಾರಿಗಳು, ರಾಜ್ಯ ಒಕ್ಕಲಿಗರ ಸಂಘ, ಕೆ.ಆರ್. ರಸ್ತೆ, ವಿ.ವಿ.ಪುರಂ, ಬೆಂಗಳೂರು.
7. ಪ್ರಿನ್ಸಿಪಾಲ್, ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಕೆ.ಆರ್.ರಸ್ತೆ, ವಿ.ವಿ.ಪುರಂ, ಬೆಂಗಳೂರು.
8. ನೋಟೀಸ್ ಬೋರ್ಡ್, ರಾಜ್ಯ ಒಕ್ಕಲಿಗರ ಸಂಘ ಕೇಂದ್ರ ಕಛೇರಿ, ಕೆ.ಆರ್. ರಸ್ತೆ, ವಿ.ವಿ.ಪುರಂ, ಬೆಂಗಳೂರು.
9. ನೋಟೀಸ್ ಬೋರ್ಡ್, ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಕೆ.ಆರ್.ರಸ್ತೆ, ವಿ.ವಿ.ಪುರಂ, ಬೆಂಗಳೂರು.
10. ಕಛೇರಿ ಕಡತ/ ಬಿಡಿ ಪ್ರತಿಗಳು.